# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು – 570 006

**ದೂರವಾಣಿ** :0821–2419318/386/429 **e-mail : dswuommgm@gmail.com**


ಸಂಖ್ಯೆ:ವಿಕ್ಷೇಪಾ.2/29/891/2018-19 ದಿನಾಂಕ: 20/08/2018

# ಸುತ್ತೋಲೆ

**ವಿಷಯ :** 2018-19ನೇ ಶೈಕ್ಷಣಿಕ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಬಗ್ಗೆ.

**ಉಲ್ಲೇಖ:** ಸುತ್ತೋಲೆ ಸಂಖ್ಯೆ: ವಿಕ್ಷೇಪಾ.2/29/759/2018-19 ದಿನಾಂಕ: 01.08.2018

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ 2018-19ನೇ ಶೈಕ್ಷಣಿಕ ಸಾಲಿನಲ್ಲಿ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು 2018ನೇ ಇಸವಿ ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ನಡೆಸಲಾಗುವುದೆಂದು ತಿಳಿಸಲಾಗಿತ್ತು. ಆದರೆ ಆಗಸ್ಟ್ 31ನೇ ತಾರೀಖಿನಂದು ಮೈಸೂರು ಮಹಾನಗರ ಪಾಲಿಕೆಯ ಚುನಾವಣೆ ಪ್ರಯುಕ್ತ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ, ಸದರಿ ಸ್ಪರ್ಧೆಗಳನ್ನು 2018ನೇ ಇಸವಿ ಸೆಪ್ಟೆಂಬರ್ ತಿಂಗಳ 03, 04 ಮತ್ತು 05ನೇ ತಾರೀಖುಗಳಂದು 03 ದಿವಸಗಳ ಕಾಲ ಹಮ್ಮಿಕೊಳ್ಳಲಾಗಿದೆ (ವೇಳಾಪಟ್ಟಿಯನ್ನು ಲಗತ್ತಿಸಿದೆ). ಈ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಉದ್ಘಾಟನಾ ಸಮಾರಂಭವನ್ನು ದಿನಾಂಕ: 03-09-2018 ರಂದು ಬೆಳಗ್ಗೆ 9.00 ಗಂಟೆಗೆ ಕಾಲೇಜುಗಳ ಸಾಂಸ್ಕೃತಿಕ ತಂಡಗಳ ಮೆರವಣಿಗೆಯೊಂದಿಗೆ ಪ್ರಾರಂಭಿಸಲಾಗುತ್ತದೆ. ಮೆರವಣಿಗೆಯಲ್ಲಿ ಭಾಗವಹಿಸುವ ತಂಡಗಳಿಗೆ ಅವರ ವಸ್ತ್ರಾಲಂಕಾರ, ಶಿಸ್ತು ಹಾಗೂ ಒಟ್ಟಾರೆ ಪರಿಣಾಮಗಳ ಆಧಾರದ ಮೇಲೆ ಬಹುಮಾನ ನೀಡಲಾಗುತ್ತದೆ. ಸಮಾರೋಪ ಸಮಾರಂಭವನ್ನು ದಿನಾಂಕ: 05-09-2018ರಂದು ಸಂಜೆ 4.00 ಗಂಟೆಗೆ ಮಾನಸಗಂಗೋತ್ರಿಯ ಸಭಾಂಗಣವೊಂದರಲ್ಲಿ ಏರ್ಪಡಿಸಲಾಗುತ್ತದೆ. ಈಗಾಗಲೇ ಕಳುಹಿಸಿರುವ ನಮೂನೆ-1ರಲ್ಲಿನ ವಿವರಗಳನ್ನು ಬೇಗನೆ ಭರ್ತಿ ಮಾಡಿ, ದಿನಾಂಕ: 30-08-2018ರೊಳಗಾಗಿ ಈ ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು. ಉಳಿದ ವಿಷಯಗಳು ಉಲ್ಲೇಖದಲ್ಲಿರುವಂತೆ ಯಥಾವತ್ತಾಗಿರುತ್ತದೆ. ಹಾಗೆಯೇ ಈ ಸಂಬಂಧದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ (www.uni-mysore.ac.in) ಪ್ರಕಟಿಸಲಾಗಿದೆ.

20/8/18

ನಿರ್ದೇಶಕ

DIRECTOR OF STUDENT WELFARE
UNIVERSITY OF MYSORE, MYSURU

**ವಿಶೇಷ ಸೂಚನೆ** : ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ನಿಬಂಧನೆಯಲ್ಲಿ ಅಣಕು ಸ್ಪರ್ಧೆಗೆ ಸಂಬಂಧಿಸಿದಂತೆ ಪ್ರಮುಖ ವ್ಯಕ್ತಿಗಳು ಮತ್ತು ಚಲನಚಿತ್ರ ತಾರೆಯರ ಧ್ವನಿಯನ್ನು ಅನುಕರಣೆ ಮಾಡಬೇಕು ಎಂಬ ನಿಯಮವಿತ್ತು. ಆದರೆ ಅದರ ಜೊತೆಯಲ್ಲಿಯೇ ಪಕ್ಷಿಗಳು, ಪ್ರಾಣಿಗಳು ಮತ್ತು ಇತರೆ ಶಬ್ದಗಳನ್ನು (ರೈಲು, ವಿಮಾನ ಮತ್ತು ಇತರೆ ವಸ್ತುಗಳ ಅನುಕರಣೆ) ಅನುಕರಿಸಬಹುದು.

ಗೆ,

ವಿಶ್ವವಿದ್ಯಾನಿಲಯದ ಎಲ್ಲಾ ಅಂಗ/ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು, ಮೈಸೂರು, ಹಾಸನ, ಮಂಡ್ಯ ಮತ್ತು ಚಾಮರಾಜನಗರ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 0821-2419318/386/429

# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು – 570006

**2018–19 ನೇ ಸಾಲಿನ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ವೇಳಾಪಟ್ಟಿ:**

| ದಿನಾಂಕ | ಕಾರ್ಯಕ್ರಮ ನಡೆಯುವ ಸ್ಥಳ | ಸಮಯ | ಸ್ಪರ್ಧೆಗಳ ವಿವರ |
|---|---|---|---|
| 03-09-2018 | ಇ.ಎಂ.ಆರ್.ಸಿ ಸಭಾಂಗಣ | ಮ: 2.00 | ಚಿತ್ರಗೀತೆ |
| | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಮ: 12.30 | ಶಾಸ್ತ್ರೀಯ ಹಾಡುಗಾರಿಕೆ |
| | | ಮ: 12.30 | ಸ್ಥಳದಲ್ಲಿ ಚಿತ್ರ ರಚನೆ |
| | | ಮ: 2.00 | ಜನಪದ ನೃತ್ಯ |
| | | ಮ: 3.00 | ವ್ಯಂಗ್ಯಚಿತ್ರ ರಚನೆ |
| | ಐನ್‌ಸ್ಟೀನ್ ಸಭಾಂಗಣ ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು | ಮ: 12.30 | ರಸಪ್ರಶ್ನೆ ಸ್ಪರ್ಧೆ (ಕ್ವಿಜ್) |
| | | ಮ: 3.00 | ಪಾಶ್ಚಾತ್ಯ ಸಂಗೀತ |
| | | ಮ: 4.00 | ವೃಂದಗಾನ (ಪಾಶ್ಚಾತ್ಯ) |
| | ಮಾನವಿಕ ಸಭಾಂಗಣ | ಮ: 12.30 | ಜನಪದ ಗೀತೆ |
| | | ಮ: 2.30 | ಲಘು ಸಂಗೀತ (ಭಾವಗೀತೆ) |
| 04-09-2018 | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಏಕಾಂಕ ನಾಟಕ |
| | | ಬೆ: 11.00 | ಜಾಹೀರಾತು ರಚನೆ (ಪೋಸ್ಟರ್ ಮೇಕಿಂಗ್) |
| | | ಮ:3.00 | ಮಣ್ಣಿನ ಮಾದರಿ ರಚನೆ |
| | | ಮ: 3.30 | ಪ್ರಹಸನ (ಸ್ಕಿಟ್) |
| | ಐನ್‌ಸ್ಟೀನ್ ಸಭಾಂಗಣ ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಏಕಪಾತ್ರಾಭಿನಯ |
| | | ಬೆ: 10.30 | ಕನ್ನಡ ಚರ್ಚಾ ಸ್ಪರ್ಧೆ |
| | | ಮ: 2.00 | ಕನ್ನಡ ಭಾಷಣ ಸ್ಪರ್ಧೆ |
| | ಮಾನವಿಕ ಸಭಾಂಗಣ | ಬೆ: 9.00 | ಅಣುಕು ಸ್ಪರ್ಧೆ |
| | | ಬೆ: 11.00 | ವೃಂದಗಾನ (ಭಾರತೀಯ) |
| | ಇ.ಎಂ.ಆರ್.ಸಿ ಹಾಲ್ | ಬೆ.10.00 | ಕಾಗದದ ಚೂರುಗಳಿಂದ ಚಿತ್ರರಚನೆ |
| 05-09-2018 | ಲಲಿತ ಕಲೆಗಳ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಶಾಸ್ತ್ರೀಯ ನೃತ್ಯ |
| | | ಬೆ: 9.00 | ರಂಗೋಲಿ ಸ್ಪರ್ಧೆ |
| | | ಮ: 12.00 | ಶಾಸ್ತ್ರೀಯ ಸ್ವರವಾದ್ಯ ಸಂಗೀತ |
| | ಐನ್‌ಸ್ಟೀನ್ ಸಭಾಂಗಣ ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು | ಬೆ: 9.00 | ಇಂಗ್ಲಿಷ್ ಚರ್ಚಾ ಸ್ಪರ್ಧೆ |
| | | ಮ:12.00 | ಇಂಗ್ಲಿಷ್ ಭಾಷಣ ಸ್ಪರ್ಧೆ |
| | ಮಾನವಿಕ ಸಭಾಂಗಣ | ಬೆ: 10.00 | ಮೂಕಾಭಿನಯ ಸ್ಪರ್ಧೆ (ಮೈಮ್) |

**ವಿಶೇಷ ಸೂಚನೆ:**

1. ವಿದ್ಯಾರ್ಥಿಗಳು ಮುಂಚಿತವಾಗಿಯೇ ಸಿದ್ಧರಾಗಿ, ನಿಗದಿತ ವೇಳೆಗೆ ಸ್ಪರ್ಧೆಗಳಲ್ಲಿ ಭಾಗವಹಿಸಿ, ಇತರೆ ಸ್ಪರ್ಧೆಗಳನ್ನು ಆಯಾಯ ಸಮಯಕ್ಕೆ ತಕ್ಕಂತೆ ನಡೆಸಲು ಅನುಕೂಲವಾಗುವಂತೆ ಸಹಕಾರ ನೀಡುವುದು.
2. ಚರ್ಚಾ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆಯ ವಿಷಯವನ್ನು ಸ್ಪರ್ಧೆಗೆ 24 ಗಂಟೆ ಮುಂಚಿತವಾಗಿ ಪ್ರಕಟಿಸಲಾಗುವುದು.
3. ಅನಿವಾರ್ಯ ಕಾರಣಗಳಿಂದ ವೇಳೆ, ಸ್ಥಳ ಬದಲಾವಣೆಯಾದರೆ ಸ್ಥಳದಲ್ಲೇ ಪ್ರಕಟಿಸಲಾಗುವುದು.
4. ಯಾವುದೇ ಸ್ಪರ್ಧೆಗೆ ಮೂರಕ್ಕಿಂತ ಕಡಿಮೆ ಸ್ಪರ್ಧಿಗಳು ಅಥವಾ ತಂಡ ಇದ್ದಲ್ಲಿ, ಅಂತಹ ಸ್ಪರ್ಧೆಯನ್ನು ರದ್ದುಪಡಿಸಲಾಗುವುದು.
5. ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು ಹಾಗೂ ಒಂದು ಜೆರಾಕ್ಸ್ ಪ್ರತಿಯನ್ನು ನೀಡಬೇಕು.

ಸಹಿ /-

ನಿರ್ದೇಶಕ